11 (53) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೀನುಗಾರಿಕೆಗೆ ಉಪಯೋಗಿಸುವ ಉಪಕರಣ/ ಸಲಕರಣೆಗಳ ಮೇಲಿನ ತೆರಿಗೆಯನ್ನು ವ್ಯಾಟ್ ಜಾರಿಯಾದ ನಂತರ ಪರಿಶಿಷ್ಟದಂತೆ ವಿಧಿಸಲಾಗುತ್ತಿದೆಯೇ ,

ಆ) ಈ ಉಪಕರಣ / ಸಲಕರಣೆಗಳಿಗೆ ತೆರಿಗೆ ರಿಯಾಯಿತಿ / ವಿನಾಯಿತಿಯನ್ನೇನಾದರೂ ನೀಡಲಾಗಿದೆಯೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)

ಅ) 01 04 2005ಕ್ಕಿಂತ ಮುಂಚೆ ಮೀನು ಹಿಡಿಯುವ ಬಲೆ ಮತ್ತು ದಾರ, ಯಾಂತ್ರೀಕೃತವಲ್ಲದ ನಾಡ ದೋಣಿಗಳು ಮತ್ತು ಬಲೆ ಚೀಲಗಳು ಮತ್ತು ಕಿವಿರು ಬಲೆಗಳು, ದಾರಗಳು, ಫ್ಲೋಟ್‌ಗಳು, ಸಿಂಕರ್‌ಗಳು ಮತ್ತು ಅದೇ ತರಹದ ಮೀನುಗಾರಿಕೆ ಸಲಕರಣೆಗಳು ತೆರಿಗೆ ವಿನಾಯಿತಿ ಹೊಂದಿದ್ದವು 01 04 2005ರಿಂದ ರಾಜ್ಯದಲ್ಲಿ ಜಾರಿಯಾಗಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆ ಅಡಿಯಲ್ಲಿಯೂ ಸಹ ಮೀನುಹಿಡಿಯುವ ಬಲೆ ಮತ್ತು ದಾರ, ಬಲೆ ಚೀಲಗಳು, ಕಿವಿರು ಬಲೆಗಳು ಮತ್ತಿತರ ಮೀನನುಗಾರಿಕೆ ಸಲಕರಣೆಗಳು ತೆರಿಗೆ ವಿನಾಯಿತಿ ಹೊಂದಿರುತ್ತವೆ ಆದರೆ, ಯಾಂತ್ರೀಕೃತವಲ್ಲದ ನಾಡ ದೋಣಿಗಳು ಶೇಕಡ 4ರ ಮೌಲ್ಯವರ್ಧಿತ ತೆರಿಗೆಗೆ ಒಳಪಡುತ್ತವೆ

ಮೌಲ್ಯವರ್ಧಿತ ತೆರಿಗೆ ಜಾರಿಗೆ ಮುನ್ನ ಟ್ರಾಲರ್‌ಗಳು ಮತ್ತಿತರ ಯಾಂತ್ರೀಕೃತ ದೋಣಿಗಳು ಮಾರಾಟ ತೆರಿಗೆಗೆ ಒಳಪಡುತ್ತಿದ್ದು, ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಶೇಕಡ 4ರ ತೆರಿಗೆಗೆ ಒಳಪಡುತ್ತವೆ

ಆ) ಮೇಲೆ ಹೇಳಿದಂತೆ ಯಾಂತ್ರೀಕೃತವಲ್ಲದ ನಾಡ ದೋಣಿಯನ್ನು ಹೊರತುಪಡಿಸಿದಂತೆ ಮಿಕ್ಕೆಲ್ಲ ಮೀನುಗಾರಿಕೆ ಸಲಕರಣೆಗಳ ಮೇಲೆ ಹಿಂದೆ ಇದ್ದ ಮಾರಾಟ ತೆರಿಗೆ ವಿನಾಯಿತಿ ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿಯೂ ಮುಂದುವರೆದಿರುವುದರಿಂದ ಅವುಗಳಿಗೆ ಮತ್ತೆ ತೆರಿಗೆ ವಿನಾಯಿತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಯಾಂತ್ರೀಕೃತವಲ್ಲದ ನಾಡ ದೋಣಿಗಳ ಮೇಲೆ ರಾಷ್ಟ್ರೀಯ ವಿನ್ಯಾಸದಂತೆ ಶೇಕಡ 4ರ ಮೌಲ್ಯವರ್ಧಿತ ತೆರಿಗೆ ವಿಧಿಸಲಾಗಿದ್ದು ಅದನ್ನು ವಿನಾಯಿತಿಗೊಳಿಸಲು ಸಾಧ್ಯವಿರುವುದಿಲ್ಲ